## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2016-17 ನೇ ಸಾಲಿನ ಆಯವ್ಯಯ ಘೋಷಣೆ- ಆಯ್ದ ಗ್ರಾಮ ಪಂಚಾಯತಿಗಳಲ್ಲಿ 'ಹಳ್ಳಿ ಸಂತೆ' ಯೋಜನೆಯಡಿ ಮಾರುಕಟ್ಟೆ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1) 2016-17 ನೇ ಸಾಲಿನ ಆಯವ್ಯಯ ಘೋಷಣೆಯ ಕ್ರಮ ಸಂಖ್ಯೆ 278
2) ಸಮಸಂಖ್ಯೆಯ ಸರ್ಕಾರದ ಆದೇಶ, ದಿನಾಂಕ 06.07.2016

***

ಮೇಲೆ ಓದಲಾದ (1) ರಲ್ಲಿ 500 ದೊಡ್ಡ ಗ್ರಾಮ ಪಂಚಾಯತಿಗಳಲ್ಲಿ 'ಹಳ್ಳಿ ಸಂತೆ' ಏರ್ಪಡಿಸಲು ವಿಲೇಜ್ ಹಾತ್ ಮಾದರಿಯಲ್ಲಿ ರೂ.25 ಕೋಟಿಗಳ ಅಂದಾಜು ಮೊತ್ತದಲ್ಲಿ ಮಾರುಕಟ್ಟೆಗಳನ್ನು ನಿರ್ಮಿಸಲು ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. 2016-17 ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2215-01-102-9-09(ಯೋಜನೆ) ರಡಿ ರೂ.17.50 ಕೋಟಿಗಳನ್ನು ಒದಗಿಸಲಾಗಿದ್ದು, ಈ ಅನುದಾನದಲ್ಲಿ ರೂ.12.50 ಕೋಟಿಗಳ ಅನುದಾನವನ್ನು 'ಹಳ್ಳಿ ಸಂತೆ' ಯೋಜನೆಗೆ ಹಾಗೂ ಬಾಕಿ ರೂ.5.00 ಕೋಟಿಗಳ ಅನುದಾನವನ್ನು ಐತಿಹಾಸಿಕ/ಪಾರಂಪರಿಕ ಹಳ್ಳಿಗಳ ಅಭಿವೃದ್ಧಿ ಯೋಜನೆಗೆ ನಿಗಧಿಪಡಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿ ಆಯ್ದ ಗ್ರಾಮಗಳಲ್ಲಿ 'ಹಳ್ಳಿ ಸಂತೆ' ಯೋಜನೆಯಡಿ ಮಾರುಕಟ್ಟೆಗಳನ್ನು ನಿರ್ಮಿಸಲು 'ಹಳ್ಳಿ ಸಂತೆ' ಯೋಜನೆಯಡಿ ಪ್ರತಿ ಮಾರುಕಟ್ಟೆ ಕಟ್ಟಡಕ್ಕೆ ರೂ.31.50 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿ, ರೂ.12.50 ಕೋಟಿಗಳಲ್ಲಿ ಒಟ್ಟು 40 ಆಯ್ದ ಗ್ರಾಮಗಳಲ್ಲಿ ಮಾರುಕಟ್ಟೆ ನಿರ್ಮಾಣ ಮಾಡಲು ಒದಗಿಸಲಾಗಿದೆ ಹಾಗೂ ಗ್ರಾಮ ಪಂಚಾಯತಿಗಳ ವಿವಿಧ ಯೋಜನೆಗಳ ಅನುದಾನದಿಂದ ಹೊಂದಾಣಿಕೆ ಮಾಡಿಕೊಂಡು ಸದರಿ ಮಾರುಕಟ್ಟೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತು ಹಾಗೂ ಮಾರುಕಟ್ಟೆ ನಿರ್ಮಾಣ ಮಾಡಬೇಕಾದ ಗ್ರಾಮ, ಸೂಕ್ತ ಸ್ಥಳ ಹಾಗೂ ರೂಪುರೇಷೆಯ ಬಗ್ಗೆ ವಿವರಿಸಲಾಗಿದೆ.

ಪ್ರಥಮ ಹಂತದಲ್ಲಿ ಆಯ್ದ 45 ಗ್ರಾಮ ಪಂಚಾಯತಿಗಳಲ್ಲಿ 'ಹಳ್ಳಿ ಸಂತೆ' ಯೋಜನೆಯಡಿ ಮಾರುಕಟ್ಟೆ ನಿರ್ಮಾಣ ಮಾಡಲು ಅನುಷ್ಠಾನ ಏಜೆನ್ಸಿಯಾಗಿ ಕರ್ನಾಟಕ ರಾಜ್ಯ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ(ಕೆ.ಆರ್.ಐ.ಡಿ.ಎಲ್.), ಬೆಂಗಳೂರು ನ್ನು ನಿಗಧಿಪಡಿಸಿ, ರಾಜ್ಯದಲ್ಲಿನ ಆಯ್ದ 45 ಗ್ರಾಮ ಪಂಚಾಯತಿಗಳಲ್ಲಿ 'ಹಳ್ಳಿ ಸಂತೆ' ಯೋಜನೆಗೆ ಮಾರುಕಟ್ಟೆ ಕಟ್ಟಡ ಹಾಗೂ ಪ್ರಾಂಗಣವನ್ನು ನಿರ್ಮಿಸಲು, ಈ ಉದ್ದೇಶಕ್ಕಾಗಿ 2016-17 ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಲಾದ ಒಟ್ಟು ರೂ.12.50 ಕೋಟಿ ಅನುದಾನವನ್ನು, ಲೆಕ್ಕ ಶೀರ್ಷಿಕೆ 2215-01-102-9-09(ಯೋಜನೆ) ರಡಿ ವೆಚ್ಚ ಭರಿಸಿ, ಕರ್ನಾಟಕ ರಾಜ್ಯ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ(ಕೆ.ಆರ್.ಐ.ಡಿ.ಎಲ್.), ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 389 ಗ್ರಾಪಂಅ 2016(ಭಾಗ-3), ಬೆಂಗಳೂರು, ದಿನಾಂಕ 20.01.2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಥಮ ಹಂತದಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಿರುವ ಆಯ್ದ 45 ಗ್ರಾಮಗಳಲ್ಲಿ 'ಹಳ್ಳಿ ಸಂತೆ' ಯೋಜನೆಯಡಿ ಮಾರುಕಟ್ಟೆ ಕಟ್ಟಡ ಹಾಗೂ ಪ್ರಾಂಗಣವನ್ನು ನಿರ್ಮಿಸಲು ಕರ್ನಾಟಕ ರಾಜ್ಯ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ(ಕೆ.ಆರ್.ಐ.ಡಿ.ಎಲ್.), ಬೆಂಗಳೂರು ಅನುಷ್ಠಾನ ಏಜೆನ್ಸಿಯಾಗಿ ನಿಗಧಿಪಡಿಸಿದೆ ಹಾಗೂ ಈ ಉದ್ದೇಶಕ್ಕಾಗಿ 2016-17 ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಲಾದ ಒಟ್ಟು ರೂ.12.50 ಕೋಟಿ ಅನುದಾನವನ್ನು, ಲೆಕ್ಕ ಶೀರ್ಷಿಕೆ 2215-01-102-9-09(ಯೋಜನೆ) ರಡಿ ವೆಚ್ಚ ಭರಿಸಿ, ಕರ್ನಾಟಕ ರಾಜ್ಯ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ(ಕೆ.ಆರ್.ಐ.ಡಿ.ಎಲ್.), ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಆದೇಶಿಸಿದೆ.

1) ಮಾರುಕಟ್ಟೆ ಮತ್ತು ಪ್ರಾಂಗಣವನ್ನು ಈ ಆದೇಶದೊಂದಿಗೆ ಲಗತ್ತಿಸಲಾದ ಮಾದರಿ ನಕ್ಷೆಯಂತೆ ಆಯಾ ಗ್ರಾಮ ಪಂಚಾಯತಿಗಳಿಗೆ ನಿಗದಿಪಡಿಸಲಾದ ಅನುದಾನದ ಮಿತಿಯಲ್ಲಿ ನಿರ್ಮಿಸುವುದು.
2) ಸಂತೆ ಮಾರುಕಟ್ಟೆಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಮೇಲೆ ಓದಲಾದ (2) ರಲ್ಲಿನ ದಿನಾಂಕ 06.07.2016 ರ ಸರ್ಕಾರದ ಆದೇಶದಲ್ಲಿ ತಿಳಿಸಿದಂತೆ ಅನುಷ್ಠಾನಗೊಳಿಸುವುದು.
3) ಸದರಿ ಕಾಮಗಾರಿಗಳನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಿ, ಪ್ರಗತಿ ವರದಿಯನ್ನು ಹಾಗೂ ಹಣ ಬಳಕೆ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ.ಸಂಖ್ಯೆ ಆಇ 280 ವೆಚ್ಚ-6/2016, ದಿನಾಂಕ 02.07.2016 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ.ವಿ.ಅರುಣ್ ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂಬರುವ ಸಂಚಿಕೆಯಲ್ಲಿ ಪ್ರಕಟಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 100 ಪ್ರತಿಗಳನ್ನು ಒದಗಿಸಲು ಕೋರಿದೆ.

**ಇವರಿಗೆ:**

1) ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ(ಕೆ.ಆರ್.ಐ.ಡಿ.ಎಲ್.), ಬೆಂಗಳೂರು.
4) ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
5) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6) ನಿರ್ದೇಶಕರು(ಪಂ.ರಾಜ್-2), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
7) ನಿರ್ದೇಶಕರು(ಗ್ರಾ.ಮೂ.ಸೌ.), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
8) ಅಧೀನ ಕಾರ್ಯದರ್ಶಿ(ಪ್ರ), ಆರ್ಥಿಕ ಇಲಾಖೆ, ವೆಚ್ಚ-5, ವಿಧಾನ ಸೌಧ, ಬೆಂಗಳೂರು.
9) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
10) ನಿರ್ದೇಶಕರು(ಯೋ.ಉ.ಮಾ.), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
11) ನಿರ್ದೇಶಕರು, ಎ.ಎನ್.ಎಸ್.ಎಸ್.ಐ.ಆರ್.ಡಿ., ಮೈಸೂರು.
12) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
13) ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.
14) ಸಂಪಾದಕರು, ಕರ್ನಾಟಕ ವಿಕಾಸ – ಪ್ರಕಟಣೆಗಾಗಿ.
15) ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
16) ಹೆಚ್ಚುವರಿ ಪ್ರತಿ/ಶಾಖಾ ರಕ್ಷಕ ಕಡತ.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾ.ಅ. ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ.
2) ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ. & ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

## 'ಹಳ್ಳಿ ಸಂತೆ' ಯೋಜನೆಯಡಿ ಮಾರುಕಟ್ಟೆ ನಿರ್ಮಿಸಲು ಪ್ರಥಮ ಹಂತದಲ್ಲಿ ಆಯ್ಕೆಯಾದ ಗ್ರಾಮಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಆಯ್ಕೆಯಾದ ಗ್ರಾಮ | ನಿಗಧಿಪಡಿಸಲಾದ ಅನುದಾನ (ಲಕ್ಷ ರೂಪಾಯಿಗಳಲ್ಲಿ) |
|---|---|---|---|---|
| 1 | ಉತ್ತರ ಕನ್ನಡ | ಹಳಿಯಾಳ | ತೇರಗಾಂವ್ | 30.00 |
| 2 | ಹಾಸನ | ಹೊಳೆನರಸೀಪುರ | ಹೆರಗು ಸಂತೆ | 30.00 |
| 3 | | ಅರಕಲಗೂಡು | ಹನ್ಯಾಳ | 30.00 |
| 4 | ಮೈಸೂರು | ಟಿ.ನರಸಿಪುರ | ಮುಡುಕುತೊರೆ | 30.00 |
| 5 | ಗದಗ | ಶಿರಹಟ್ಟಿ | ಕೂಗನೂರು | 30.00 |
| 6 | | ಗದಗ | ಹುಲಕೋಟಿ | 30.00 |
| 7 | ಚಾಮರಾಜನಗರ | ಗುಂಡ್ಲುಪೇಟೆ | ಬೇಗೂರು | 30.00 |
| 8 | ಹಾವೇರಿ | ಹಾವೇರಿ | ಹಾವನೂರು | 30.00 |
| 9 | | ಬ್ಯಾಡಗಿ | ದೇವಿಹೊಸೂರು | 30.00 |
| 10 | | ರಾಣೇಬೆನ್ನೂರು | ಗುಡುಗೂರು | 30.00 |
| 11 | | ಸವಣೂರ | ಕಡಕೋಳ | 30.00 |
| 12 | ಕೊಪ್ಪಳ | ಕೊಪ್ಪಳ | ಕಿನ್ನಾಳ | 29.00 |
| 13 | ಚಿತ್ರದುರ್ಗ | ಹೊಳಲ್ಕೆರೆ | ರಾಮಗಿರಿ | 27.00 |
| 14 | | ಹೊಸದುರ್ಗ | ಬೆಳಗೂರು | 27.00 |
| 15 | ತುಮಕೂರು | ಕೊರಟಗೆರೆ | ಪುರವರ | 27.00 |
| 16 | | ತಿಪಟೂರು | ಹೊನ್ನವಳ್ಳಿ | 27.00 |
| 17 | ಶಿವಮೊಗ್ಗ | ಸಾಗರ | ಮಾಸೂರು | 27.00 |
| 18 | | ತೀರ್ಥಹಳ್ಳಿ | ಹಣಗೆರೆ | 27.00 |
| 19 | | ಶಿಕಾರಿಪುರ | ತೊಗರ್ಸಿ | 27.00 |
| 20 | ಕೋಲಾರ | ಶ್ರೀನಿವಾಸಪುರ | ಗೌನಿಪಲ್ಲಿ | 27.00 |
| 21 | | ಮುಳಬಾಗಿಲು | ಹೆಬ್ಬಣಿ | 27.00 |
| 22 | ಕಲಬುರಗಿ | ಚಿತ್ತಾಪುರ | ನಾಲ್ವಾರ | 27.00 |
| 23 | | ಯಲಬುರ್ಗಾ | ತಳಕಲ್ | 27.00 |
| 24 | | ಅಫ್ಜಲ್‌ಪುರ | ಗುಡೂರು | 27.00 |
| 25 | | ಚಿಂಚೋಳಿ | ಐನಾಪೂರ | 27.00 |
| 26 | ಬೀದರ್ | ಹುಮನಾಬಾದ | ಹಳ್ಳಿಖೇಡ ಬಿ | 27.00 |
| 27 | ಬೆಳಗಾವಿ | ಕಿತ್ತೂರು | ನೇಗಿನಹಾಳ | 27.00 |
| 28 | | ಚಿಕ್ಕೋಡಿ ಸದಲಗಾ | ಕೋಥಳಿ | 27.00 |
| 29 | | ಅಥಣಿ | ರಡ್ಡೇರಹಟ್ಟಿ | 27.00 |
| 30 | ಬಾಗಲಕೋಟೆ | ಬೀಳಗಿ | ಅನವಾಲ | 27.00 |


| | | | | |
|---|---|---|---|---|
| 31 | ವಿಜಯಪುರ | ಮುದ್ದೇ ಬಿಹಾಳ | ಬಸರಕೋಡ | 27.00 |
| 32 | | ಬಸವನ ಬಾಗೇವಾಡಿ | ವಂದಾಲ | 27.00 |
| 33 | | ಇಂಡಿ | ಅಗರಖೇಡ | 27.00 |
| 34 | | ವಿಜಯಪುರ | ಕೆ.ಸಿದ್ದಾಪುರ | 27.00 |
| 35 | | ಸಿಂಧಗಿ | ಹಿಟ್ನಳ್ಳಿ | 27.00 |
| 36 | ಚಿಕ್ಕಮಗಳೂರು | ಮೂಡಿಗೆರೆ | ಬೆಟ್ಟಗೇರೆ | 27.00 |
| 37 | ಧಾರವಾಡ | ನವಲಗುಂದ | ಮೊರಬ | 27.00 |
| 38 | | ಕುಂದಗೋಳ | ಯರಗುಪ್ಪಿ | 27.00 |
| 39 | | ಕಲಘಟಗಿ | ದುಮ್ಮವಾಡ | 27.00 |
| 40 | ಯಾದಗಿರಿ | ಶಹಪೂರ | ಬೆಂಡೇಬೆಂಬಳಿ | 27.00 |
| 41 | ರಾಯಚೂರು | ಸಿಂಧನೂರು | ಆರ್.ಹೆಚ್.ನಂ.1 ರ ವ್ಯಾಪ್ತಿಯಲ್ಲಿ ಬರುವ ಆರ್‌ಹೆಚ್.ನಂ.3 ಗ್ರಾಮ ಪಂಚಾಯತಿ | 27.00 |
| 42 | ದಾವಣಗೆರೆ | ಹೊನ್ನಾಳಿ | ಸಾಸ್ವೆಹಳ್ಳಿ | 27.00 |
| 43 | | ಚನ್ನಗಿರಿ | ಸಂತೆಬೆನ್ನೂರು | 27.00 |
| 44 | ಚಿಕ್ಕಬಳ್ಳಾಪುರ | ಗೌರಿಬಿದನೂರು | ಹೊಸೂರು | 27.00 |
| 45 | ಬಳ್ಳಾರಿ | ಕೂಡ್ಲಗಿ | ಉಜ್ಜನಿ | 27.00 |
| ಒಟ್ಟು | | | | **1250.00** |

(ಟಿ.ವಿ.ಅರುಣ್ ಕುಮಾರ್)

ಉಪನಿರ್ದೇಶಕರು ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.



OPTION-01

DETAILS OF PROPOSED SUNDAY MARKET (ಭಾನುವಾರ ಸಂತೆ) IN APMC's